# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶೆಟ್ಟಿಹಳ್ಳಿ ಉಪವಿಭಾಗ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹತ್ತಿರ, ರವೀಂದ್ರನಗರ, ಶೆಟ್ಟಿಹಳ್ಳಿ ಕ್ರಾಸ್,

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಾಸರಹಳ್ಳಿ ವಲಯ ವಾರ್ಡ್ ಸಂಖ್ಯೆ 12 ರಲ್ಲಿ ದಿನಾಂಕ:-05/01/2019 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ಕೆ.ನಾಗಭೂಷಣ್ ಅಧ್ಯಕ್ಷರು
2. ಶ್ರೀ.ಹನುಮಂತರಾಜು ಸದಸ್ಯರು
3. ಶ್ರೀಮತಿ.ವೀಣಾ ಸದಸ್ಯರು
4. ಶ್ರೀಮತಿ.ಸೌಭಾಗ್ಯಲಕ್ಷ್ಮಿ ಸದಸ್ಯರು
5. ಶ್ರೀ.ಬಿ.ಕೆ.ಸುಧಾಕರ್ ಸದಸ್ಯರು
6. ಶ್ರೀಮತಿ.ಗಂಗಮ್ಮ ಸದಸ್ಯರು
7. ಶ್ರೀ.ಎನ್.ಮಂಜುನಾಥ್ ಸದಸ್ಯರು
8. ಶ್ರೀ.ರಾಜಶೇಖರಯ್ಯ ಸದಸ್ಯರು
9. ಶ್ರೀ.ನಾರಾಯಣಸ್ವಾಮಿ ಸದಸ್ಯರು
10. ಶ್ರೀಮತಿ.ಎಸ್.ಪ್ರಮೀಳಮ್ಮ ಸ.ಕಂ.ಅ ಮತ್ತು ಕಾರ್ಯದರ್ಶಿ ಹಾಗೂ ಸಂಚಾಲಕರು
11. ಶ್ರೀ.ಹೆಚ್.ಶಿವಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (SWD)
12. ಶ್ರೀಮತಿ.ಕೆ.ಎಸ್.ಸುಧಾಮಣಿ ಹಿರಿಯ ಆರೋಗ್ಯ ಪರಿವೀಕ್ಷಕರು
13. ಶ್ರೀ.ವೆಂಕಟರಾಯಪ್ಪ ಪ್ರ.ದ.ಸ ಕಲ್ಯಾಣಾ ಶಾಖೆ (ದಾ.ವ)
14. ಶ್ರೀ.ಸುರೇಶ್ ದೇವತಾರಾಜ್ ಸಹಾಯಕ ಅಭಿಯಂತರರು ವಾರ್ಡ್ ನಂ.12 ಶೆಟ್ಟಿಹಳ್ಳಿ
15. ಶ್ರೀ.ಟಿ.ರಘುನಾಥ್ ಹಿರಿಯ ಆರೋಗ್ಯ ಪರಿವೀಕ್ಷಕರು

ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಂಚಾಲಕರಾದ ಶ್ರೀಮತಿ.ಎಸ್,ಪ್ರಮೀಳಮ್ಮ ರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರನ್ನು ಸಭೆಗೆ ಆಹ್ವಾನಿಸಿ, ಸಭೆಯ ಉದ್ದೇಶವನ್ನು ಈ ಕೆಳಗಿನಂತೆ ವಿವರಿಸಿದರು.

ವಾರ್ಡ್ ನಂ.12 ಶೆಟ್ಟಿಹಳ್ಳಿ ವ್ಯಾಪ್ತಿಯಲ್ಲಿ 2018-19ನೇ ಸಾಲಿನ ಕಲ್ಯಾಣ ಕಾರ್ಯಕ್ರ,ಮಗಳನ್ನು ಅತ್ಯಂತ ಜರೂರಾಗಿ ಅನುಸ್ಠಾನಗೊಳಿಸಬೇಕಾಗಿರುವುದರಿಂದ ವಾರ್ಡ್ ಸಮಿತಿ ಸಭೆಯನ್ನು ನಡೆಸಿ ನಡವಳಿಯನ್ನು ಮಾನ್ಯ ಜಂಟಿ ಆಯುಕ್ತರಿಗೆ ಸಲ್ಲಿಸಬೇಕಾಗಿರುವುದರಿಂದ ಈ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಅನುಸ್ಠಾನಗೊಳಿಸಲು ಉದ್ದೇಶಿಸಲಾಗಿದ್ದು, ಸದರಿ ಕಾರ್ಯಕ್ರಮಗಳಲ್ಲಿ ಬರುವ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಣೆ ಮಾಡಲು ಅರ್ಹ ಫಲಾನುಭವಿಗಳನ್ನು ಅತಿ ಜರೂರಾಗಿ ಆಯ್ಕೆ ಮಾಡಬೇಕಾಗಿರುತ್ತದೆಂದು ಸಭೆಗೆ ತಿಳಿಸಿದರು.

ನಂತರ ವಾರ್ಡ್‌ನ ಸಹಾಯಕ ಅಭಿಯಂತರರಾದ ಶ್ರೀ.ಸುರೇಶ್ ರವರು ಮಾತನಾಡಿ ವಾರ್ಡ್ ನಂ.12ರಲ್ಲಿ ಒಂಟಿ ಮನೆ ನಿರ್ಮಾಣ ಮಾಡಿಕೊಡುವಂತೆ ಕೋರಿ ಅರ್ಜಿಗಳು ಬಂದಿದ್ದು, ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಬೇಕಾಗಿದೆ ಎಂದು ಸಭೆಗೆ ತಿಳಿಸಿ ಫಲಾನುಭವಿಗಳ ಪಟ್ಟಿಯನ್ನು ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ನೀಡಿದರು. ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಸದರಿ ಪಟ್ಟಿಯನ್ನು ಪರಿಶೀಲಿಸಿ ಮುಂದಿನ ವಾರ್ಡ್ ಸಭೆಯಲ್ಲಿ ಅನುಮೋದಿಸಲಾಗುವುದೆಂದು ತಿಳಿಸಿದರು.

ಕಲ್ಯಾಣಾಧಿಕಾರಿಗಳ ಪರವಾಗಿ ಶ್ರೀ.ವೆಂಕಟರಾಯಪ್ಪ ಪ್ರಥಮ ದರ್ಜೆ ಸಹಾಯಕರು ರವರು ಹಾಜರಾಗಿ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾತನಾಡಿ ಸಾರ್ವಜನಿಕರಿಗೆ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಪ್ರಚುರಪಡಿಸಲು ಕರ ಪತ್ರಗಳ ಮೂಲಕ ತಿಳಿಸಲಾಗಿರುತ್ತದೆ ಹಾಗೂ ಸಾರ್ವಜನಿಕರು 10.01.2019 ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಸಭೆಗೆ ತಿಳಿಸಿ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಕಾರ್ಯಕ್ರಮಗಳ ವಿವರವಿರುವ ಕರಪತ್ರವನ್ನು ನೀಡಿದರು. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉಚಿತ ಮನೆ ನಿರ್ಮಿಸಿಕೊಡಲು ಇಂತಿಷ್ಟೆ ಫಲಾನುಭವಿಗಳಿಂದ ಅರ್ಜಿಗಳನ್ನು ಪಡೆದುಕೊಳ್ಳಬೇಕೆಂಬ ಮಿತಿ ಇರುವುದಿಲ್ಲ. ಆದರೆ ಹಿಂದುಳಿದ ವರ್ಗಗಳಿಗೆ ಪ್ರತಿ ವಾರ್ಡ್‌ಗೆ 5 ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಿಸಿಕೊಡುವಂತೆ ಮಿತಿ ಇರುವಂತೆ ಸಭೆಗೆ ತಿಳಿಸಿದರು.

ಮುಂದುವರೆದು, ನರ್ಮ್ ಯೋಜನೆ ಅಡಿಯಲ್ಲಿ ಪ್ರತಿ ವಾರ್ಡ್‌ಗೆ ತಲಾ ಎರಡರಂತೆ ರಾತ್ರಿ ನಿರ್ಗತಿಕ ವಸತಿ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶವಿದ್ದು, ಸರ್ಕಾರಿ ಜಾಗಗಳನ್ನು ಗುರುತಿಸಿಕೊಡುವಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. ಅದರಂತೆ ಸ್ಥಳ ಗುರುತಿಸಿ ಮುಂದಿನ ಸಭೆಯಲ್ಲಿ ಮಂಡಿಸಲಾಗುವುದೆಂದು ಕಂದಾಯ ಪರಿವೀಕ್ಷಕರು ಸಭೆಗೆ ತಿಳಿಸಿದರು.

ಶೆಟ್ಟಿಹಳ್ಳಿ ಜನತಾ ಕಾಲೋನಿ ಅರಳಿ ಮರದ ಹತ್ತಿರ ಅನುಪಯುಕ್ತ ಹ್ಯಾಂಡ್ ಪಂಪ್ ಇದ್ದು, ಇದನ್ನು ತೆರವುಗೊಳಿಸಲು ತಿಳಿಸಿದ್ದು, ವಾರ್ಡ್ ಅಭಿಯಂತರರು ಸದರಿ ಅನುಪಯುಕ್ತ ಹ್ಯಾಂಡ್ ಪಂಪ್‌ನ್ನು ಶೀಘ್ರದಲ್ಲಿ ತೆರವುಗೊಳಿಸಲಾಗುವುದೆಂದು ತಿಳಿಸಿದರು.

ಶೆಟ್ಟಿಹಳ್ಳಿ ಜನತಾ ಕಾಲೋನಿಯಲ್ಲಿ ಕೆಲವು ಜಾಗಗಳಲ್ಲಿ ಬಾಕಿ ಇರುವ ಚರಂಡಿಗಳನ್ನು ನಿರ್ಮಿಸಲು ಕೋರಿದ್ದು, ವಾರ್ಡ್ ಅಭಿಯಂತರರು ಮುಂದಿನ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ಬಾಕಿ ಇರುವ ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಿದರು.

ವಾರ್ಡ್ ಸಮಿತಿ ಸದಸ್ಯರಾದ ಶ್ರೀ.ನಾರಾಯಣಸ್ವಾಮಿ ರವರು ಮಾತನಾಡಿ ಶೆಟ್ಟಿಹಳ್ಳಿ ಕೆರೆಯಲ್ಲಿ ಮಳೆ ನೀರು ನಿಲ್ಲಿಸಲು ಕ್ರಮವಹಿಸಲು ತಿಳಿಸಿದರು. ಕೆರೆ ಅಭಿವೃದ್ಧಿ ವಿಭಾಗದ ಅಭಿಯಂತರರು ಸಭೆಗೆ ಹಾಜರಾಗದೇ ಇರುವುದರಿಂದ ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೇ ಹಾಜರಾಗುವಂತೆ ಸಭೆಯಲ್ಲಿ ಸೂಚಿಸಲಾಯಿತು.

ವಾರ್ಡ್ ಸಮಿತಿ ಸದಸ್ಯರಾದ ಶ್ರೀ.ನಾರಾಯಣಸ್ವಾಮಿ ರವರು ಮಾತನಾಡಿ ಕಮ್ಮಗೊಂಡನಹಳ್ಳಿ ಕಲಾನಗರ ರಸ್ತೆಯಲ್ಲಿರುವ ಮಳೆ ನೀರು ಕಾಲುವೆಗೆ ಹೊಂದಿಕೊಂಡಂತೆ ಕಾಂಪೌಂಡ್ ವಾಲ್ ಹಾಗೂ ಮುಂಭಾಗದಲ್ಲಿ ಸ್ಟೇರ್ ಕೇಸ್ ನಿರ್ಮಿಸುತ್ತಿದ್ದು, ಇದನ್ನು ಪರಿಶೀಲಿಸಿ ಕ್ರಮವಹಿಸಲು ತಿಳಿಸಿದರು, ಅದರಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರು ಮಾತನಾಡಿ ವಾರ್ಡ್ ಅಭೀಯಂತರರೊಂದಿಗೆ ಸ್ಥಳ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವುದಾಗಿ ಸಭೆಗೆ ತಿಳಿಸಿದರು.

ವಾರ್ಡ್ ಸಮಿತಿ ಸದಸ್ಯರಾದ ಶ್ರೀ.ರಾಜಶೇಖರಯ್ಯ ರವರು ಮಾತನಾಡಿ ಸರ್ವೆ ನಂ.72ರ ರಾಘವೇಂದ್ರ ಬಡಾವಣೆಯಲ್ಲಿರುವ ಸರ್ಕಾರಿ ಜಾಗಕ್ಕೆ ಫೆನ್ಸಿಂಗ್ ನಿರ್ಮಿಸಲು ತಿಳಿಸಿದರು, ಹಾಗೂ ಚಿಕ್ಕಸಂದ್ರ ಗ್ರಾಮದ ಸರ್ವೆ ನಂ.46 ರ ಪಕ್ಕದಿರುವ ಸರ್ಕಾರಿ ಖರಾಬು ಜಾಗಕ್ಕೆ ಫೆನ್ಸಿಂಗ್ ಹಾಕಲು ತಿಳಿಸಿದರು. ಅದರಂತೆ ವಾರ್ಡ್ ಅಭಿಯಂತರರು ಮಾತನಾಡಿ ಸರ್ಕಾರಿ ಜಾಗಳನ್ನು ಬಿಬಿಎಂಪಿ ವಶಕ್ಕೆ ಪಡೆಯಲು ಸರ್ವೆ ಕಾರ್ಯ ನಡೆಸಬೇಕಾಗಿದ್ದು, ಸರ್ವೆ ಮಾಡಿ ನಕ್ಷೆ ನೀಡಲು ಸಹಾಯಕ ಆಯುಕ್ತರು (ಆಸ್ತಿಗಳು) ರವರಿಗೆ ಶೀಘ್ರದಲ್ಲಿ ಕಡತ ಮಂಡಿಸಲಾಗುವುದೆಂದು ಸಭೆಗೆ ತಿಳಿಸಿದರು.

ವಾರ್ಡ್ ಸಮಿತಿ ಸದಸ್ಯರಾದ ಶ್ರೀ.ರಾಜಶೇಖರಯ್ಯ ರವರು ಮಾತನಾಡಿ ಹೆಸರಘಟ್ಟ ಮುಖ್ಯರಸ್ತೆಯ ಬೋ ಮಿಲ್ ಬಸ್ ಸ್ಟಾಪ್ ಹತ್ತಿರ ಸಾರ್ವಜನಿಕರ ಉಪಗೋಗಕ್ಕಾಗಿ ಶೌಚಾಲಯ ಅವಶ್ಯಕವಾಗಿದ್ದು, ಬಸ್‌ಸ್ಟಾಂಡ್ ಪಕ್ಕದಲ್ಲಿ ಇರುವ ಜಾಗವು BWSSB ರವರಿಗೆ ಸೇರಿದ ಜಾಗವಿರುವುರಿಂದ ಸದರಿಯವರಿಂದ ಅನುಮತಿ ಪಡೆದು ಕೂಡಲೇ ಶೌಚಾಲಯ ನಿರ್ಮಿಸವಂತೆ ತಿಳಿಸಿದರು.

ವಾರ್ಡ್ ಸಮಿತಿ ಸದಸ್ಯರಾದ ಶ್ರೀ.ನಾರಾಯಣಸ್ವಾಮಿ ರವರು ಮಾತನಾಡಿ ಕಾವೇರಿ ನೀರನ್ನು 5 ದಿನಗಳಿಗೊಮ್ಮೆ ಬಿಡಲಾಗುತ್ತಿದ್ದು, ಅದನ್ನು ವಾರಕ್ಕೆ 2 ದಿನಗಳಿಗೊಮ್ಮೆ ಬಿಡುವಂತೆ BWSSB ಅಧಿಕಾರಿಗಳಿಗೆ ತಿಳಿಸಿದರು, ಈ ಬಗ್ಗೆ BWSSB ಕಿರಿಯ ಅಭಿಯಂತರರು ಮಾತನಾಡಿ ಮುಂದಿನ ಸಭೆಯಲ್ಲಿ ಈ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸಭೆಗೆ ಮಾಹಿತಿ ನೀಡಲಾಗುವುದೆಂದು ತಿಳಿಸಿದರು.

ನಂತರ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ.ಕೆ.ನಾಗಭೂಷಣ್ ರವರು ಮಾತನಾಡಿ, ಹೆಸರಘಟ್ಟ ಮುಖ್ಯರಸ್ತೆ ಚಿಕ್ಕಸಂದ್ರದಲ್ಲಿರುವ ಆಶೀರ್ವಾದ್ ಗ್ರ್ಯಾಂಡ್ ಹೋಟೆಲ್ ಎದುರಿನಲ್ಲಿರುವ BWSSB ಲೈನ್ ಹಾದು ಹೋಗಿರುವ ಜಾಗವನ್ನು ಹೋಟೆಲ್ ನವರು ಪಾರ್ಕಿಂಗ್ ಜಾಗವಾಗಿ ನಿರ್ಮಾಣ ಮಾಡಿಕೊಂಡಿರುವುದಾಗಿ ತಿಳಿಸಿದ್ದು, ಈ ಬಗ್ಗೆ BWSSB ಕಿರಿಯ ಅಭಿಯಂತರರು ಮಾತನಾಡಿ ಮುಂದಿನ ಸಭೆಯಲ್ಲಿ ಈ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸಭೆಗೆ ಮಾಹಿತಿ ನೀಡಲಾಗುವುದೆಂದು ತಿಳಿಸಿದರು

ವಾರ್ಡ್‌ನಲ್ಲಿ ಪೌರಕಾರ್ಮಿಕರ ಕೊರತೆ ಬಗ್ಗೆ ಸದಸ್ಯರುಗಳು ಪ್ರಸ್ತಾಪಿಸಿದರು ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡ್‌ವಾರು ಪೌರ ಕಾರ್ಮಿಕರ ರೋಡ್ ಮ್ಯಾಪಿಂಗ್ ಕಾರ್ಯವು ಪ್ರಗತಿಯಲ್ಲಿದ್ದು, ಸದರಿ ಕಾರ್ಯವು ಪೂರ್ಣಗೊಂಡ ನಂತರ ಹೆಚ್ಚುವರಿ ಎಷ್ಟು ಪೌರ ಕಾರ್ಮಿಕರ ಅವಶ್ಯಕತೆ ಉದ್ಭವಿಸುತ್ತದೆ ಎಂಬುದರ ಬಗ್ಗೆ ಅಂತಿಮ ನಿರ್ಧಾರವಾದ ನಂತರ ಹೆಚ್ಚುವರಿಯಾಗಿ ಅವಶ್ಯಕತೆ ಇರುವ ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ಆಂಜನೇಯ ದೇವಸ್ಥಾನದ ಹತ್ತಿರ ಹಾವುಗಳ ಕಾಟ ಹೆಚ್ಚಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಖಾಲಿ ನಿವೇಶನಗಳಲ್ಲಿರುವ ಅನುಪಯುಕ್ತ ವಸ್ತುಗಳನ್ನು ಹಾಗೂ ಗಿಡಗಂಟೆಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮ ವಹಿಸಿ ಮುಂದಿನ ಸಭೆಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲಾಗುವುದೆಂದು ತಿಳಿಸಿದರು.

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ ಮತ್ತು ಸಂಚಾಲಕರು
ಹಾಗೂ ಸಹಾಯಕ ಕಂದಾಯ ಅಧಿಕಾರಿ
ಶೆಟ್ಟಿಹಳ್ಳಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ